ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 1, March-April 2025, Pp. 30-35
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕಬ್ಬಲಿಗ ಸಮಾಜದ ನೇತಾರ ಶ್ರೀ ವಿಠ್ಠಲ ಹೇರೂರು

**ಡಾ. ಬಸವರಾಜ ಸಾಲವಾಡಗಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಬಿಎಲ್‌ಡಿಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಬಸವನಬಾಗೇವಾಡಿ.

***Abstract:***
*ದಿವಂಗತ ವಿಠ್ಠಲ ಹೇರೂರವರು ತಮ್ಮ ಕೋಲಿ ಸಮಾಜಕ್ಕಾಗಿ ಡಾ. ಬಾಬಾಸಾಹೇಬ ಅಂಬೇಡ್ಕರ್ ಅವರು ಹೇಳಿದಂತೆ ಸಂಘಟನೆಗಾಗಿ, ಶಿಕ್ಷಣಕ್ಕಾಗಿ, ಹೋರಾಟಕ್ಕಾಗಿ ಧ್ವನಿ ಎತ್ತಿದ ಧೀವಂತ ನಾಯಕರಾಗಿದ್ದರು. ಅವರು ಶ್ರೀ ಅಂಬಿಗರ ಚೌಡಯ್ಯನವರ ಜಯಂತಿಗಳನ್ನು ಆಚರಿಸುವುದರ ಮೂಲಕ ತಮ್ಮ ಕಬ್ಬಲಿಗ, ಬೆಸ್ತ, ಕೋಲಿ, ಅಂಬಿಗ, ಗಂಗಾಮತಸ್ಥ ಮುಂತಾದ ಉಪನಾಮವನ್ನೊಳಗೊಂಡ ಸರ್ವ ಜನರನ್ನು ಒಂದುಗೂಡಿಸುವಲ್ಲಿ ಮತ್ತು ಇಡೀ ಕರ್ನಾಟಕದಲ್ಲಿ ಕಬ್ಬಲಿಗ ಜನಾಂಗದವರಲ್ಲಿ ಕಣ್ಣು ತೆರೆಸಿದವರೆಂದರೆ ವಿಠ್ಠಲ ಹೇರೂರು ಎಂದು ಹೇಳಬಹುದು.*

***Keywords:*** *ಸಾಮಾಜಿಕ ಹೋರಾಟ, ವಿಠ್ಠಲ ಹೇರೂರ, ಕಬ್ಬಲಿಗ, ಕೋಲಿ, ಅಂಬಿಗ, ಗಂಗಾಮತಸ್ಥ.*

## ಪೀಠಿಕೆ

ನೇರ ನಿಷ್ಠುರ ಸರಳ ವ್ಯಕ್ತಿತ್ವದ ಶ್ರೀ ವಿಠ್ಠಲ ಹೇರೂರು ರವರು ದಿಟ್ಟ ಹೋರಾಟಗಾರರಾಗಿ ತಮ್ಮ ಸಮಾಜವನ್ನು ಸಂಘಟಿಸುವಲ್ಲಿ ಶ್ರಮವಹಿಸಿ ಆ ಸಮಾಜದಲ್ಲಿದ್ದ ಅಜ್ಞಾನ, ಮೌಢ್ಯ, ಸಂಪ್ರದಾಯಗಳನ್ನು ಅಳಿಸಿಹಾಕಿ ಸಮಾಜ ಸುಧಾರಣೆಯಲ್ಲಿ ಪ್ರಮುಖ ಪಾತ್ರವಹಿಸಿರುತ್ತಾರೆ. ಇವರು ಕಬ್ಬಲಿಗ ಸಮಾಜದ ಹುಲಿಯಾಗಿ, ನಾಯಕನಾಗಿ, ಹುಟ್ಟು ಹೋರಾಟಗಾರನಾಗಿ, ರಾಜಕಾರಣಿಯಾಗಿ, ಕರ್ನಾಟಕ ಸರ್ಕಾರದ ಮುಖ್ಯ ಸಚೇತಕರಾಗಿ, ಕೆಳವರ್ಗದ ಶೋಷಿತ ಸಮುದಾಯದ ಕೊರಳು ಧ್ವನಿಯಾಗಿ, ಜನನಾಯಕರಾಗಿ, ಸಮಾಜದ ಉದ್ಧಾರಕನಾಗಿ, ಸೇವಕನಾಗಿ, ತಮ್ಮ ಸಮಾಜದ ಅಭಿಮಾನಿಗಳ ಹೃದಯದಲ್ಲಿ ಅಜರಾಮರವಾಗಿ ಉಳಿದಿದ್ದಾರೆ. ಹಿಂದುಳಿದ ಈ ಸಮಾಜವನ್ನು ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಔದ್ಯೋಗಿಕವಾಗಿ ತಮ್ಮ ಸಮಾಜವನ್ನು ಮುಂದೆ ತರುವ ನಿಟ್ಟಿನಲ್ಲಿ ವಿಠ್ಠಲ ಹೇರೂರವರ ಪಾತ್ರ ಬಹಳಷ್ಟಿದೆ. ಆ ಮೂಲಕ ಬೆಂಗಳೂರಿನಿಂದ ಬೀದರ್‌ವರೆಗಿನ ಜನರನ್ನು ಸಂಘಟಿಸಿ ಹೋರಾಟಗಳನ್ನೇ ಮಾಡಿ ತಮ್ಮ ಸಮಾಜ ಕುರಿತು ಸರ್ಕಾರದ ಕಣ್ಣು ತೆರೆಯಿಸಿ ಸಂವಿಧಾನ ಬದ್ಧವಾಗಿ ಸ್ಥಾನಮಾನಗಳನ್ನು ಕಲ್ಪಿಸಿ ಕೊಡುವಲ್ಲಿ ಹಗಲಿರುಳು ಪ್ರಯತ್ನಿಸಿದ್ದಾರೆ.

## ಜನನ

ಪ್ರಗತಿಪರ ಚಿಂತಕರಾದ ಶ್ರೀ ವಿಠ್ಠಲ ಹೇರೂರ ಅವರು ಕಲ್ಬುರ್ಗಿ ಜಿಲ್ಲೆಯ ಅಫಜಲಪುರ ತಾಲೂಕಿನ ಪವಿತ್ರ ಸುಕ್ಷೇತ್ರ ಗಾಣಗಾಪುರದಲ್ಲಿ 10.4.1953ರಲ್ಲಿ ಜನಿಸಿದರು. ಶ್ರೀ ತಿಪ್ಪಣ್ಣ ಮತ್ತು ತುಕಾಬಾಯಿ ಇವರ

***Please cite this article as:*** ಬಸವರಾಜ ಸಾಲವಾಡಗಿ. (2025). ಕಬ್ಬಲಿಗ ಸಮಾಜದ ನೇತಾರ ಶ್ರೀ ವಿಠ್ಠಲ ಹೇರೂರು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(1), 30–35

ತಂದೆ ತಾಯಿಗಳಾಗಿದ್ದರು. ತಂದೆ ವ್ಯವಸಾಯ ಮತ್ತು ಕಟ್ಟಡಗಳಿಗೆ ಬಳಸುತ್ತಿದ್ದ ಗಚ್ಚಿನ (ಗಾರೆ) ಗುತ್ತಿಗೆದಾರರಾಗಿ ಕೆಲಸ ನಿರ್ವಹಿಸುತ್ತಿದ್ದರು. ವಿಠ್ಠಲರು ಚಿಕ್ಕವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡಿದ್ದರಿಂದ ತಂದೆ, ಚಿಕ್ಕಪ್ಪ, ಸೋದರ ಮಾವನ ಮಡದಿ ಶ್ರೀಮತಿ ಬಸ್ಸಮ್ಮ ಹಾಗೂ ಅಜ್ಜಿ ನಾಗಮ್ಮಳ ಆರೈಕೆಯಲ್ಲಿ ಬೆಳೆಯಬೇಕಾಯಿತು.

ಬಾಲ್ಯದಲ್ಲಿ ಓದುವ ಹವ್ಯಾಸ ಬೆಳೆಸಿಕೊಂಡಿದ್ದ ಇವರು ಉತ್ತಮ ಜ್ಞಾಪಕಶಕ್ತಿ ಜ್ಞಾನದಾಹ ಮತ್ತು ಮುಂದಾಲೋಚನೆ ಸ್ವಭಾವವುಳ್ಳವರಾಗಿದ್ದರು. ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ತಮ್ಮ ಸ್ವಗ್ರಾಮದಲ್ಲಿಯೇ ಪೂರೈಸಿ ಪಿಯುಸಿಯನ್ನು ಗುಲ್ಬರ್ಗಾದ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಪೂರೈಸಿದರು. ಐತಿಹಾಸಿಕ ಗೋಲ್‌ಗುಂಬಜ್ ಇರುವ ವಿಜಯಪುರದಲ್ಲಿ ಬಿಎಸ್ಸಿ ಪದವಿ ಪಡೆದರು. ಮುಂದೆ ಇವರು ಕಾನೂನು ಪದವಿಯನ್ನು ಪಡೆಯಲು ಸಿಲಿಕಾನ್ ಸಿಟಿ ಮತ್ತು ನಮ್ಮ ರಾಜ್ಯದ ರಾಜ್ಯಧಾನಿಯಾದ ಬೆಂಗಳೂರಿಗೆ ಹೋಗಿ ಎಲ್‌ಎಲ್‌ಬಿ ಪದವಿಯನ್ನು ಪಡೆದುಕೊಂಡರು. ಮತ್ತು ಅದರ ಅನುಭವಕ್ಕಾಗಿ ಬೆಂಗಳೂರಿನ ಗಣ್ಯ ವಕೀಲರಾದ ಸಿ.ಎಚ್. ಹನುಮಂತರಾಯ ಹತ್ತಿರ ತಮ್ಮ ವಕೀಲ ವೃತ್ತಿಯನ್ನು ಪ್ರಾರಂಭಿಸಿದರು. ಆಗ ಈತ್ತ ತಮ್ಮ ಊರಾದ ಗಾಣಗಾಪುರದಲ್ಲಿ ಮೇಲ್ವರ್ಗದವರಿಂದ ಹಾಗೂ ಶ್ರೀಮಂತರಿಂದ ಕೆಳವರ್ಗದವರ, ಹಿಂದುಳಿದವರ ಮೇಲೆ, ಬಡವರ ಮೇಲೆ, ಕೂಲಿ ಕಾರ್ಮಿಕರ ಮೇಲೆ, ದೀನದಲಿತರ ಮೇಲೆ, ಅನಾಥ ನಿರ್ಗತಿಕರ ಮೇಲೆ ಆಗುತ್ತಿದ್ದ ಶೋಷಣೆಗಳನ್ನು ಸೂಕ್ಷ್ಮವಾಗಿ ಗಮನಿಸಿದ ವಿಠ್ಠಲ ಹೇರೂರರು ಬೆಂಗಳೂರಿನಲ್ಲಿ ತಮ್ಮ ವಕೀಲ ವೃತ್ತಿಗೆ ಶರಣು ಹೇಳಿ ಊರಿಗೆ ಬಂದು ರಾಜಕೀಯ ಹಾಗೂ ಸಾಮಾಜಿಕ ಹೋರಾಟಗಳ ಕಡೆಗೆ ಗಮನ ಹರಿಸಿದರು.

**ರಾಜಕೀಯ ಜೀವನ**

ಹೇರೂರರ ತಂದೆ ತಿಪ್ಪಣ್ಣ ಹಾಗೆ ಚಿಕ್ಕಪ್ಪ ಇವರಿರ್ವರೂ 1968 ರಿಂದ 1978 ರವರೆಗೆ ಗಾಣಗಾಪುರದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದರು. ಹಾಗಾಗಿ ಇವರಿಗೆ ರಾಜಕೀಯ ಹಾಗೂ ನಾಯಕತ್ವದ ಗುಣಗಳು ಬೆಳೆದು ಬಂದಿದ್ದರಿಂದ 1978 ರಿಂದ ಇವರು ರಾಜಕೀಯಕ್ಕೆ ಸೇರ್ಪಡೆಗೊಂಡರು. ಇದೇ ವರ್ಷದಿಂದಲೆ ಇವರ ರಾಜಕೀಯ ಹೋರಾಟ, ಸಾಮಾಜಿಕ ಹೋರಾಟಗಳು ಪ್ರಾರಂಭಗೊಂಡು ಅವರ ಜೀವನದ ಅಂತ್ಯದವರೆಗೂ ಮುಂದುವರೆದಿರುವುದನ್ನು ನೋಡಬಹುದು.

1978ರಲ್ಲಿ ಹೆರೂರರು ತಮ್ಮ ಬೆಂಬಲಿಗರಾದ ಇಬ್ರಾಹಿಂ ಮನಿಯಾರ, ಸಿದ್ದರಾಮ ಗಾಯಕವಾಡ, ಲಕ್ಷ್ಮಣ್ಣ ಮಾರುತಿ, ಮಹೆಬೂಬ ಇಟಗಿ, ಗೋವಿಂದ ಭಟ್ಟ, ಸಂಗಣ್ಣ ರಾಜಶೇಖರ, ಅಣುವಿರಪ್ಪ ಮುಂತಾದವರೊಂದಿಗೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು. ಮುಂದೆ ಹೇರೂರವರು ಅವಿರೋಧವಾಗಿ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿ ಆಯ್ಕೆಯಾಗುತ್ತಾರೆ. ಅಲ್ಲಿಂದಲೇ ಇವರ ರಾಜಕೀಯ ಸಾಮಾಜಿಕ ಸುಧಾರಣೆಯ ಪರ್ವಕಾಲ ಆರಂಭವಾಯಿತು. ಗ್ರಾಮದ ಸಮಗ್ರ ಅಭಿವೃದ್ಧಿಯ ಕನಸು ಕಾಣುತ್ತಿದ್ದ ಇವರು ತಮ್ಮ ಪಂಚಾಯಿತಿಯ ಅಧ್ಯಕ್ಷಗಿರಿಯಲ್ಲಿ ಎಂಟು ಹತ್ತು ಎಕರೆ ಭೂಮಿ ಖರೀದಿಸಿ ಅದನ್ನು ಗ್ರಾಮ ಪಂಚಾಯಿತಿ ಆಸ್ತಿ ಎಂದು ಘೋಷಿಸಿ ಆ ಪಂಚಾಯಿತಿಗೆ ಒಂದು ಜಾಗವನ್ನಾಗಿ ಮಾಡಿದರಲ್ಲದೆ ಸರ್ಕಾರದಿಂದ ಬರುವ ಸ್ಥಳವಿಲ್ಲದೆ ಮಂಜೂರಾದ ಹಣವನ್ನು ಸರಿಯಾಗಿ ಬಳಸಿಕೊಂಡು ಗಾಣಗಾಪುರದಲ್ಲಿ ಅನೇಕ ಸರ್ಕಾರಿ ಕಟ್ಟಡಗಳಾಗಲು ಕಾರಣರಾದರು.

**ರಾಜಕೀಯ ಸಾಧನೆಗಳು**

1982ರಲ್ಲಿ ವಿಠ್ಠಲ ಹೇರೂರರು ವಿಧಾನಸಭಾ ಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿದರು.

ನಂತರ ಇವರು ಹನುಮಂತರಾವ್ ದೇಸಾಯಿಯವರಿಗೆ (ಜನತಾ ಪಕ್ಷದ ಅಭ್ಯರ್ಥಿ) ಬೆಂಬಲಸೂಚಿಸಿ ತಾವು ಸ್ಪರ್ಧೆಯಿಂದ ಹಿಂದೆ ಸರಿದು ಅವರನ್ನು ಆಯ್ಕೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದರು. ನಂತರ 1985 ರಲ್ಲಿ ಹೇರೂರರು ಅಫಜಲಪುರ ತಾಲೂಕ ಒಕ್ಕಲತನ ಹುಟ್ಟುವಳಿ ಮಾರಾಟ ಮಂಡಳಿಯ ಅಧ್ಯಕ್ಷರಾದರು, ಆ ಮೂಲಕ ವ್ಯವಸಾಯ ಮಾಡುವ ರೈತರಿಗೆ ಹಲವಾರು ಸುಧಾರಣೆಗಳನ್ನು ಮಾಡಿದರು.ಇದಲ್ಲದೆ 1988–1991ರ ಅವಧಿಯಲ್ಲಿ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದರ ಮೂಲಕ ರಾಜಕೀಯವಾಗಿ ಬೆಳೆಯಬೇಕೆಂಬ ಇಚ್ಛೆಯಿಂದಾಗಿ ಹಾಗೂ ತಮ್ಮ ಸಮಾಜವನ್ನು ಸಂಘಟಿಸಬೇಕೆಂಬ ಮಹಾದಾಸೆಯಿಂದಾಗಿ ಆಂಧ್ರಪ್ರದೇಶ, ಗುಜರಾತ, ರಾಜಸ್ಥಾನ ಮುಂತಾದ ಬೇರೆ ಬೇರೆ ರಾಜ್ಯಗಳ ಸಂಸದರನ್ನು ಸಚಿವರನ್ನು, ಮಂತ್ರಿಗಳನ್ನು ಕರೆಯಿಸಿ ತಮ್ಮ ಸಮಾಜದ ಬಂಧುಗಳಲ್ಲಿ ಜಾಗೃತಿ ಮೂಡಿಸಿದರು. ಆ ಮೂಲಕ ತಮ್ಮ ಪ್ರತಿಭೆ ಜನಪ್ರಿಯತೆಯನ್ನು ಶಕ್ತಿಯನ್ನು ತಮ್ಮ ಸಮಾಜಕ್ಕೆ ತೋರಿಸಿಕೊಟ್ಟರು. ಆದರೆ ಏನೋ ಮಾಡುವುದು ಹೆಣ್ಣಿಗೆ ಹೆಣ್ಣೇ ಶತ್ರು ಎಂಬಂತೆ ಕೆಲವು ರಾಜಕೀಯ ನಾಯಕರು ಇವರಿಗೆ ರಾಜಕೀಯವಾಗಿ ಬೆಳೆಯಲು ಆಸ್ಪದ ಕೊಡಲಿಲ್ಲ. ಕಾರಣ ಇವರು ರಾಜಕೀಯವಾಗಿ ಬೆಳೆದರೆ ತಮ್ಮ ಸ್ಥಾನಗಳು ಕೈತಪ್ಪಿ ಹೋಗುತ್ತವೆ ಎಂಬ ಆತಂಕ ಆ ರಾಜಕೀಯ ಮುಖಂಡರಲ್ಲಿತ್ತು. ಅದಕ್ಕಾಗಿ 1998ರಲ್ಲಿ ಹೇರೂರರು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ನಾಯಕಿ ಮಾಯಾವತಿಯವರ ಸಮ್ಮುಖದಲ್ಲಿ ಆ ಪಕ್ಷಕ್ಕೆ ಸೇರ್ಪಡೆಯಾಗುತ್ತಾರೆ. ಮುಂದೆ ಅದೇ ಪಕ್ಷದಿಂದ ಚುನಾವಣೆಗೆ ನಿಂತು ಸೋತರು. 1999 ರಲ್ಲಿ ನಡೆದ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಹೇರೂರರು ಮತ್ತೆ ಅದೇ ಬಿಎಸ್‌ಪಿ ಪಕ್ಷದಿಂದ ಸ್ಪರ್ಧಿಸಿ 1,80,000 ಮತಗಳನ್ನು ಪಡೆಯುವುದರ ಮೂಲಕ ತಮ್ಮ ರಾಜಕೀಯ ಶಕ್ತಿಯನ್ನು ಜನಪ್ರಿಯತೆಯನ್ನು ತೋರಿಸಿ ಕೊಟ್ಟರು. ಇವರ ಈ ಜನಪ್ರಿಯತೆಯನ್ನು ಕಂಡು ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ದೇವೇಗೌಡರು ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳುತ್ತಾರೆ. 2004ರಲ್ಲಿ ಸನ್ಮಾನ್ಯ ಶ್ರೀ ದೇವೇಗೌಡರು ಹೇರೂರವರನ್ನು ಕಲಬುರ್ಗಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನಾಗಿ ಘೋಷಿಸಿ ಕಣಕಳಿಸಿದರು. ಅಲ್ಲದೆ ಇವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ನಾಮಕರಣ ಮಾಡಿಸಿರುತ್ತಾರೆ. 30.10.2008 ರಂದು ಸನ್ಮಾನ್ಯ ಶ್ರೀ ದೇವೇಗೌಡರು ಶ್ರೀ ಹೇರೂರರವರನ್ನು ಸರ್ಕಾರದ ಮುಖ್ಯ ಸಚೇತಕರನ್ನಾಗಿ ಮಾಡುತ್ತಾರೆ.

ನವೆಂಬರ್ 30, 2004 ರಂದು ಹೇರೂರವರು ಕಲಬುರ್ಗಿಯಲ್ಲಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಿದರು ಈ ಕಾರ್ಯಕ್ರಮಕ್ಕೆ ತಮ್ಮನ್ನು ಗುರುತಿಸಿ ವಿಧಾನಸಭಾ ಸದಸ್ಯರನ್ನಾಗಿ ಮಾಡಿದ ಶ್ರೀ ದೇವೇಗೌಡ ಹಾಗೂ ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರನ್ನು ಕರೆಯಿಸಿ ಸನ್ಮಾನಿಸುತ್ತಾರೆ. ಇದೆ ಕಾರ್ಯಕ್ರಮದಲ್ಲಿ ಹೆರೂರವರು ಅಂಬಿಗರ ಚೌಡಯ್ಯನವರ ಅಧ್ಯಯನ ಪೀಠವನ್ನು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸ್ಥಾಪಿಸಬೇಕು. ಹಾಗೆಯೇ ಸರ್ಕಾರದ ಮಟ್ಟದಲ್ಲಿ 'ಅಂಬಿಗರ ಚೌಡಯ್ಯನವರ ಜಯಂತಿ'ಯನ್ನು ಆಚರಿಸಬೇಕೆಂಬ ಬೇಡಿಕೆಯನ್ನಿಟ್ಟರು. ಅದರ ಫಲವಾಗಿ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಅಂಬಿಗರ ಚೌಡಯ್ಯನ ಪೀಠ ಸ್ಥಾಪನೆಯಾಯಿತು. ಅಲ್ಲದೆ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಆಚರಿಸಲು ಸಮ್ಮತಿಸಲಾಯಿತು ಆ ಮೂಲಕ ಇವರು ತಮ್ಮ ಕಬ್ಬುಲಿಗ, ಕೋಲಿ, ಅಂಬಿಗರ, ಸಮಾಜಕ್ಕೆ ನ್ಯಾಯ ದೊರಕಿಸಿ ಕೊಟ್ಟರಲ್ಲದೆ ಅವರ ಸಮಾಜಕ್ಕೆ ನಿಡಿದ ಬಹುದೊಡ್ಡ ಕೊಡುಗೆಗಳಾಗಿವೆ. 2008 ರಲ್ಲಿ ಮಧ್ಯಂತರ ಚುಣಾವಣೆ ನಡೆಯುತ್ತದೆ ಆಗ ಇವರು ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಂಡು ಗುರುಮಿಠಕಲ್ ವಿಧಾನಸಭಾ ಮತ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡರು. ಮುಂದೆ 2013 ರಲ್ಲಿ

ಭಾರತೀಯ ಜನತಾ ಪಕ್ಷವನ್ನು ತೊರೆದ ಇವರು ಜನತಾದಳದಕ್ಕೆ ಸೇರ್ಪಡೆಗೊಂಡು ಅಫಜಲಪುರ ವಿಧಾನಸಭಾ ಮತ ಕ್ಷೇತ್ರದಿಂದ ಸ್ಪರ್ಧಿಸಿ ಪರಾಭವಗೊಂಡರು.

**ಸಾಮಾಜಿಕ ಜೀವನ**

ಹೇರೂರವರ ಸಮಾಜ ಸುಧಾರಣೆಯ ಹೋರಾಟವು ವರ್ಗರಹಿತ ಹಾಗೂ ಜಾತಿ ರಹಿತವಾಗಿ ಪ್ರಾರಂಭಗೊಂಡಿತು. ಇದು ಅವರು ಗಾಣಗಾಪುರದಲ್ಲಿ ಪಂಚಾಯಿತಿ ಅಧ್ಯಕ್ಷರಾಗಿದ್ದಾಗ ಹಲವಾರು ಸಮಾಜಮುಖಿ ಕಾರ್ಯಗಳನ್ನು ಮಾಡಿದರಲ್ಲದೆ ಹಳೆಯ ಸಂಪ್ರದಾಯಗಳಿಗೆ ತಿಲಾಂಜಲಿಯನ್ನಿಟ್ಟು ಹೊಸ ಸಂಪ್ರದಾಯಗಳಿಗೆ ಬುನಾದಿ ಹಾಕಿದರು. ತಮ್ಮ ಭಾಗದಲ್ಲಿ ದಲಿತರಿಗೆ ದೇವಾಲಯಗಳಿಗೆ ಪ್ರವೇಶ ಅವಕಾಶ ಕಲ್ಪಿಸಿಕೊಟ್ಟರು. ಅಲ್ಲದೆ ತಮ್ಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಳ್ಳಿಗಳಲ್ಲಿ ಸರಾಯಿ ನಿಷೇಧ ಜಾರಿ ಮಾಡಿರುತ್ತಾರೆ. ಮತ್ತು ತಮ್ಮ ಊರಿನ ಜಾತ್ರೆಯಲ್ಲಿ ನಾಟಕದ ಉದ್ಘಾಟನೆಯನ್ನು ಗಣ್ಯ ವ್ಯಕ್ತಿಗಳಿಂದ ಮಾಡಿಸದೆ ಕೊರವೇರ ಲಚ್ಚಪ್ಪನೆಂಬ ಕಲಾವಿದರಿಂದ ಮಾಡಿಸಿ ಶ್ರೀ ಸಾಮಾನ್ಯರ ಬಗ್ಗೆ ತಮ್ಮಗಿರುವ ಕಾಳಜಿಯನ್ನು ಎತ್ತಿ ತೋರಿಸಿದರು. ಅಲ್ಲದೆ ಆ ನಾಟಕ ಸಂಘಕ್ಕೆ 11000 ಸಾವಿರ ರೂಪಾಯಿಗಳನ್ನು ಕೊಡುಗೆಯಾಗಿ ನೀಡಿ ತಮ್ಮ ಉದಾರತೆಯನ್ನು ತೋರಿಸಿಕೊಟ್ಟರು.

**ಸಾಮಾಜಿಕವಾಗಿ ಮಾಡಿದ ಇವರ ಸಾಧನೆಗಳು**

ದಲಿತರ, ಹಿಂದುಳಿದವರ, ಬಡವರ, ನಿರ್ಗತಿಕರ, ಶೋಷಿತರ ಪರವಾಗಿ ಹೋರಾಡಲು 'ಗಜಾನನ ಸಂಘ' ಎಂಬ ಸಂಸ್ಥೆಯನ್ನು ಕಟ್ಟಿ ಸುಮಾರು 25 ರಿಂದ 30 ಯುವಕರಿಂದ ಈ ಸಂಘದಿಂದ ಅನೇಕ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡರು. ಶ್ರೀಮಂತರಿಂದ ಬಡವರ ಮೇಲಾಗುವ ಅನ್ಯಾಯ ದೌರ್ಜನ್ಯ, ಶೋಷಣೆ ಆಗುವುದನ್ನು ತಪ್ಪಿಸಿದರು. ಅಲ್ಲದೆ ಗಜಾನನ ಸಂಘವೆಂದರೆ ಹೇರೂರು, ಹೇರೂರು ಅಂದರೆ ಗಜಾನನ ಸಂಘ ಎಂಬುವಂತೆ ಮಾಡಿದರು. 1988 ರಲ್ಲಿ ಶ್ರೀ ಹೆರೂರವರು ಎಂಟನೇ ರಾಜ್ಯಮಟ್ಟದ ಬಂಡಾಯ ಸಾಹಿತ್ಯ ಸಮ್ಮೇಳನವನ್ನು ದೇವಲ ಗಾಣಗಾಪುರದಲ್ಲಿ ನಡೆಸಿದರು. ಆ ಮೂಲಕ ತುಳಿತಕ್ಕೆ ಒಳಗಾದವರ ಜನರಲ್ಲಿ ವೈಚಾರಿಕ ಅರಿವು ಹಾಗೂ ತಮ್ಮ ಸಮಾಜದ ಜನರಿಗೆ ಜಾಗೃತಿ ಮೂಡಿಸಲು ಕಾರಣರಾದರು. 1989 ರಲ್ಲಿ ಇವರು ಶೋಷಿತ ಜನ ಸಮುದಾಯಗಳ ಸಮಾವೇಶವನ್ನು ಆಯೋಜಿಸುವುದರ ಮೂಲಕ ಎಲ್ಲಾ ಜಾತಿ ಧರ್ಮಗಳ ಶೋಷಿತರು, ಬಡವರು, ಕೂಲಿ ಕಾರ್ಮಿಕರು, ಒಂದಾಗಿ ಹೋರಾಡುವಂತೆ ಕರೆ ನೀಡಿದರು. 1991ರಲ್ಲಿ ಶ್ರೀ ಹೇರೂರವರು ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಹಿಂದುಳಿದ ಕೋಲಿ, ಕಬ್ಬಲಿಗ, ಅಂಬಿಗ, ತಳವಾರ, ಬೆಸ್ತ, ಗಂಗಾಮತಸ್ಥ ಮುಂತಾದ ಉಪನಾಮಗಳನ್ನಳಗೊಂಡ ಕೋಲಿ ಸಮಾಜದ ಜಾಗೃತಿ ಸಮಾವೇಶವನ್ನು ಅಫಜಲಪುರದಲ್ಲಿ ನಡೆಸಿದರು. ಈ ಕಾರ್ಯಕ್ರಮಕ್ಕೆ ರಾಜ್ಯ ಮತ್ತು ರಾಷ್ಟ್ರ ನಾಯಕರನ್ನು ಕರೆಯಿಸಿ ತಮ್ಮ ಸಮಾಜದ ಜಾಗೃತಿಗೆ ಸಂಘಟನೆಗೆ, ಬಲವರ್ಧನೆಗೆ ಕರೆ ನೀಡಿದರು. ಈ ಕಾರ್ಯಕ್ಕೆ ಕೈ ಜೋಡಿಸಿದವರೆಂದರೆ ಡಾ. ಭಗವಂತಪ್ಪ ಪಿ ಬುಳ್ಳಾ. ಡಾ. ಮಲ್ಲಿಕಾರ್ಜುನ ಮುಕ್ಕಾ, ಶ್ರೀ ಯಮನಪ್ಪ ಸರ್, ಶ್ರೀ ನಾಗಣ್ಣ ಮುಕ್ಕಾ, ಶ್ರೀ ಬಾಬುರಾವ್ ಜಮಾದಾರ, ಮುಂತಾದವರು ಇವರಿಗೆ ಬೆಂಬಲಿಸಿ ಸಮಾಜ ಸುಧಾರಣೆಗೆ ಶ್ರಮಿಸಿದರು.

ಕೋಲಿ ಸಮಾಜದವರಲ್ಲಿರುವ ಕಂದಾಚಾರ, ಅನಾಚಾರ, ಮೂಡನಂಬಿಕೆ, ಅನಿಷ್ಟ ಆಚರಣೆಗಳು, ಕೀಳರಿಮೆ ಭಾವನೆಗಳನ್ನು ತೊಡೆದುಹಾಕಲು ಶ್ರಮಿಸಿದರಲ್ಲದೆ ಅತ್ಯಂತ ಹಿಂದುಳಿದ ಕೋಲಿ ಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ (ಎಸ್‌ಟಿ) ಸೇರ್ಪಡಿಸಬೇಕೆಂಬ ವಿಚಾರಕ್ಕಾಗಿ 1996ರಲ್ಲಿ ರಾಷ್ಟ್ರಮಟ್ಟದ ಕೋಲಿ ಸಮಾಜದ ಜಾಗೃತಿ ಸಮಾವೇಶವನ್ನು ಕಲಬುರ್ಗಿಯಲ್ಲಿ ನಡೆಸಲಾಗಿತ್ತು.

2000–2001 ರಿಂದ ಕಲಬುರ್ಗಿ ಜಿಲ್ಲೆಯಲ್ಲಿ ಅಂಬಿಗರ ಚೌಡಯ್ಯನವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ತಮ್ಮ ಸಮುದಾಯದ ಜನಾಂಗವನ್ನು ಒಂದುಗೂಡಿಸುವಲ್ಲಿ ಮತ್ತು ಅಲ್ಲಲ್ಲಿ ಅಂಬಿಗರ ಚೌಡಯ್ಯನವರ ಮೂರ್ತಿಗಳು, ಮಂದಿರಗಳು, ಸಮುದಾಯ ಭವನಗಳ ನಿರ್ಮಾಣವಾಗಲು ಮತ್ತು ಚೌಡದಾನಪುರದಲ್ಲಿ ಚೌಡಯ್ಯನವರ ರಾಜ್ಯ ಗುರುಪೀಠ ಸ್ಥಾಪನೆ ಮಾಡಿ ಶ್ರೀ ಶ್ರೀ ಶಾಂತ ಮುನಿ ಸ್ವಾಮಿಗಳನ್ನು ಪೀಠಾಧೀಶರನ್ನಾಗಿಸಲು ಪ್ರಮುಖ ಕಾರಣರಾದರು. ಹೇರೂರವರು ದಿನಾಂಕ 23.7.2008 ರಂದು ತಮ್ಮ ಕೋಲಿ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕೆಂದು "ಬೆಂಗಳೂರು ಚಲೋ" ಎಂಬ ಘೋಷಣೆಯೊಂದಿಗೆ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಆಂದೋಲನವನ್ನೇ ನಡೆಸಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ತಮ್ಮ ಸಮುದಾಯದ ಬೇಡಿಕೆಯನ್ನು ಮುಂದಿಡುತ್ತಾರೆ.

ಹೀಗೆ ಕೋಲಿ ಸಮಾಜವೆಂದರೆ ಹೇರೂರು, ವಿಠ್ಠಲ ಹೇರೂರು ಎಂದರೆ ಕೋಲಿ ಸಮಾಜ ಎಂಬಂತೆ ತಮ್ಮ ಸಮಾಜಕ್ಕಾಗಿ ಹಗಲಿರುಳು ಶ್ರಮಿಸಿ ಕೊನೆಗೆ ತಮ್ಮ 60ನೇ ವಯಸ್ಸಿನಲ್ಲಿ ದಿನಾಂಕ 3.12.2013 ರಂದು ಕಲಬುರ್ಗಿಯಲ್ಲಿ ಶಿವಾಧೀನರಾದರು. ಹೀಗೆ ಕರ್ನಾಟಕದಲ್ಲಿ ಕೋಲಿ ಸಮಾಜದ ಮರು ಜನ್ಮವಾಗಿ ಪುನರುಜೀವನ ಹೊಂದಿದ್ದು ಶ್ರೀ ವಿಠ್ಠಲ ಹೆರೂರರವರಿಂದ ಎಂಬುದನ್ನು ಯಾರು ಮರೆಯುವಂತಿಲ್ಲ. ಕೋಲಿ ಸಮಾಜದ ಸೂರ್ಯ ಅಸಂಗತನಾಗಿದ್ದು ಆ ಸಮಾಜಕ್ಕೆ ಆದ ನಷ್ಟವಾಗಿತ್ತು. ಅವರ ದೇಹ ಮಾತ್ರ ನಮ್ಮಿಂದ ಅಗಲಿದ್ದರೂ ಅವರು ಸಮಾಜಕ್ಕಾಗಿ ಮಾಡಿದ ಹೋರಾಟಗಳು, ಕಲ್ಯಾಣ ಕಾರ್ಯಗಳು, ಮಾಡಿದ ಮಹದುಪಕಾರದ ಕಾರ್ಯಗಳು ಶಾಶ್ವತವಾಗಿ ನೆನಪಿನಲ್ಲಿ ಉಳಿಯುತ್ತವೆ.

ದಿವಂಗತ ಹೇರೂರವರು ಸಮುದಾಯದ ಒಂದು ಶಕ್ತಿಯಾಗಿದ್ದರು. ದಿವ್ಯ ಚೇತನರಾಗಿದ್ದರು ಒಂದು ಸಂಸ್ಥೆ, ಒಂದು ಸಂಘ, ಒಂದು ಸಮಾಜ ಮಾಡಬೇಕಾದ ಅನೇಕ ಕಾರ್ಯಗಳನ್ನು ಒಂಟಿಯಾಗಿ ಮಾಡಿದರು. ಇವರಲ್ಲಿ ಕಂಚಿನ ಧ್ವನಿಯಿದೆ, ಹೋರಾಟದ ಮನೋಭಾವವಿದೆ, ಎದುರಿಸುವ ಧೈರ್ಯವಿದೆ ನಿಸ್ವಾರ್ಥತೆಯಿದೆ, ಬಡವರ ದೀನ ದಲಿತರ ಶೋಷಿತರ ಬಗ್ಗೆ ಕಾಳಜಿ ಒಲವು ಇದೆ.

**ಉತ್ತಮ ಸಂಘಟನಗಾರರು**

ಹೇರೂರರ ಸಂಘಟನಾ ಶಕ್ತಿ ಅಧಮ್ಯವಾಗಿತ್ತು. ಅವರು ಯಾವುದೇ ಸಮಾವೇಶಗಳನ್ನು ಮಾಡಿದರೂ ಅವರ ಒಂದು ಕರೆಗೆ ಲಕ್ಷಗಟ್ಟಲೆ ಜನರು ಸೇರುತ್ತಿದ್ದರು. ಆ ನಿಟ್ಟಿನಲ್ಲಿ ಸಮಾಜಕ್ಕಾಗಿ ಹೋರಾಡಿದ್ದಾರೆ. 1996ರಲ್ಲಿ ಕಲ್ಬುರ್ಗಿಯಲ್ಲಿ ನಡೆದ ಸಮಾವೇಶಕ್ಕೆ ಅಂದಿನ ಭಾರತದ ಪ್ರಧಾನ ಮಂತ್ರಿ ದೇವೇಗೌಡರನ್ನು ಆಹ್ವಾನಿಸಿ ತಮ್ಮ ಸಮಾಜದಲ್ಲಿ ಮಿಂಚಿನ ಸಂಚಲನವನ್ನುಂಟು ಮಾಡಿದರು. ಹೀಗೆ ಪ್ರತಿ ಸಮಾವೇಶಕ್ಕೆ ದೇಶದ ಪ್ರಭಾವಿ ಮುಖಂಡರನ್ನು ಕರೆಯಿಸುವ ಸಾಮರ್ಥ್ಯ ಅವರಲ್ಲಿತ್ತು.

**ಚೌಡಯ್ಯನವರ ಜ್ಯೋತಿ ಯಾತ್ರೆ**

ಹೇರೂರವರು ಅಂಬಿಗರ ಚೌಡಯ್ಯನ ಕಾರ್ಯಕ್ಷೇತ್ರವಾದ ಹಾವೇರಿ ಜಿಲ್ಲೆಯ ರಾಣಿಬೆನ್ನೂರು ತಾಲೂಕಿನ ಚೌಡಯ್ಯ ದಾನಪುರದಿಂದ ಅಂಬಿಗರ ಚೌಡಯ್ಯನವರ ಜ್ಯೋತಿಯನ್ನು ನಾಡಿನ ತುಂಬೆಲ್ಲಾ ಯಾತ್ರೆಯ ರೂಪದಲ್ಲಿ ಕೊಂಡೊಯ್ಯುವ ಕನಸು ಕಂಡಿದ್ದರು. ಅಲ್ಲದೆ ಕೆಲವು ಕಡೆಗಳಲ್ಲಿ ಈ ಜ್ಯೋತಿ ಯಾತ್ರೆಗಳನ್ನು ಆರಂಭಿಸಿ ದೇಶದ ಜನತೆಗೆ ಸರ್ಕಾರಕ್ಕೆ ಇಂತಹ ಒಂದು ಕಬ್ಬಲಿಗ ಸಮಾಜವಿದೆ ಎಂಬುದನ್ನು ತೋರಿಸಿಕೊಟ್ಟರು. ಆಗ ಈ ಒಂದು ಸಮಾಜಕ್ಕೆ ಐಡೆಂಟಿಟಿ ಅನ್ನೋದು ದೊರಕಿತು. ಅಂತಹ ಮಹತ್ಕಾರ್ಯವನ್ನು ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.

**ಧೈರ್ಯವಂತ ನಾಯಕ**

'ಧೈಯರ್ಂ ಸರ್ವತ್ರ ಸಾಧನಂ' ಎಂಬಂತೆ ಹೇರೂರವರು ತುಂಬಾ ಧೈರ್ಯವಂತರಾಗಿದ್ದರು. ಅವರ ಹೆಸರೇ ಒಂದು ಸಿಂಹಘರ್ಜನೆಯಾಗಿತ್ತು. ಭಯ ಎಂಬ ಶಬ್ದವೇ ಅವರಿಗೆ ಗೊತ್ತಿರಲ್ಲವೇನೋ ಎಂಬಂತೆ ಅವರ ನೇರ ನಡೆ–ನುಡಿಯಾಗಿದ್ದವರು ಅವರ ಮಾತುಗಳು ಗಂಡೆದೆಯ ಸೀಳುವ ಬುಲೆಟ್ಟುಗಳಂತಿರುತ್ತಿದ್ದವು. ಹಾಗಾಗಿಯೇ ಇವರು ತಮ್ಮ ಸಮಾಜದ **'ಹುಲಿ ಮತ್ತು ಸೂರ್ಯ'** ಎಂದು ಹೆಸರಾಗಿದ್ದರು. ಯಾವುದೇ ಅನ್ಯಾಯವನ್ನು ಪ್ರತಿಭಟಿಸಲು ಹಿಂದೆ ಮುಂದೆ ನೋಡದೆ ಹೋರಾಟ ಮಾಡುವ ಪ್ರವೃತ್ತಿಯುಳ್ಳವರಾಗಿದ್ದರು.

ತ್ಯಾಗಮಯಿಯಾಗಿ ಶ್ರೀ ಹೇರೂರವರು ಕಠೋರವಾಗಿದ್ದರೂ, ಹೃದಯ ವೈಶಾಲ್ಯತೆಯುಳ್ಳವರಾಗಿದ್ದರು. ಸಮಾಜದ ವಿಷಯ ಬಂದಾಗ ಸಮಾಜಕ್ಕಾಗಿ ತಮ್ಮ ಸರ್ವಸ್ವವೆಲ್ಲವನ್ನು ಬಿಟ್ಟು ಕೊಡುವಂತಹ ಮನಸ್ಥಿತಿಯನ್ನು ಹೊಂದಿದವರಾಗಿದ್ದರು. ಹಣ, ಅಂತಸ್ತು, ಅಧಿಕಾರಕ್ಕಾಗಿ ಆಸೆ ಪಟ್ಟವರಲ್ಲ, ಕೆಲವು ಸಂದರ್ಭಗಳಲ್ಲಿ ಚುನಾವಣೆಗಳಲ್ಲಿ ತಮ್ಮ ಮತಕ್ಷೇತ್ರವನ್ನು ಬಿಟ್ಟುಕೊಟ್ಟ ಮಹಾನುಭಾವರೆನಿಸಿಕೊಂಡರು. ಬಡವರಿಗೆ, ಶೋಷಿತರಿಗೆ, ಹಿಂದುಳಿದವರಿಗೆ ಅನ್ಯಾಯಕ್ಕೆ ದೌರ್ಜನ್ಯಕ್ಕೆ ಒಳಗಾದವರಿಗೆ ನೊಂದವರಿಗೆ ಸಾಂತ್ವನ ಹೇಳಿ, ಅವರಿಗೆ ನ್ಯಾಯ ದೊರಕಿಸಿಕೊಡುತ್ತಿದ್ದರು.

**ವ್ಯಕ್ತಿತ್ವ :** ಶ್ರೀ ವಿಠ್ಠಲ ಹೇರೂರವರು ತಮ್ಮ ಕಬ್ಬಲಿಗ ಜನಾಂಗದ ಬಡ ವಿದ್ಯಾರ್ಥಿಗಳಿಗಾಗಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದರಲ್ಲದೆ. ತಮ್ಮ ಜೀವನವಿಡಿ ತಮ್ಮ ಜನಾಂಗಕ್ಕಾಗಿಯೇ ಮೀಸಲಿಟ್ಟವರು. ನನಗಿಂತ ಮತ್ತು ನನ್ನ ಮನೆಗಿಂತ ನನ್ನ ಸಮಾಜ ಮುಖ್ಯ ಎಂಬುವಂತೆ ಸಮಾಜಕ್ಕೆ ಮಹತ್ವ ಕಾರ್ಯಗಳನ್ನು ಮಾಡಿ ತೋರಿಸಿಕೊಟ್ಟರು. ಒಟ್ಟಿನಲ್ಲಿ ಕಬ್ಬಲಿಗ ಸಮುದಾಯದ ಕೀರ್ತಿ, ಕಳಸ, ಸೂರ್ಯ, ಮುಕುಟ ಈ ವಿಠ್ಠಲ ಹೇರೂರವರೆಂದು ಹೇಳಬಹುದು. ಈ ಜನಾಂಗದ ಆಶಾಕಿರಣ ಅಪ್ರತಿಮ ನಾಯಕ, ನಿಷ್ಠುರವಾದಿ, ಮಾನವತಾವಾದಿ, ಸ್ವಾಭಿಮಾನಿ, ಸಾಹಸ ಮುಂತಾದ ವಿಶೇಷಗಳಿಂದ ಸಮಾಜದಲ್ಲಿ ಹೆಸರುವಾಸಿಯಾಗಿದ್ದಾರೆ. ಅವರು ಇಂದು ನಮ್ಮೊಂದಿಗೆ ಇಲ್ಲದಿದ್ದರೂ ಅವರು ಮಾಡಿದ ಕಾರ್ಯಗಳು ಇಂದಿಗೂ ನಮಗೆ ನೆನಪಿಸುತ್ತವೆ. **"**ಇಟ್ಟರೆ ಸಗಣಿಯಾದೆ, ತಟ್ಟಿದರೆ ಕುರುಳಾದೆ, ಸುಟ್ಟರೆ ನೋಸಲಿಗೆ ವಿಭೂತಿಯಾದೆ, ನಿನಾರಿಗಾದೆಯೋ ಎಲೆ ಮಾನವ**"** ಎಂಬ ಅಮರವಾಣಿಯಂತೆ ಒಂದು ಆಕಳು ಇಷ್ಟೆಲ್ಲಾ ಉಪಯೋಗ ಮಾಡುವಾಗ ಮಾನವನಾದ ನಾನೇಕೆ ಒಳ್ಳೆಯ ಪರೋಪಕಾರ ಕೆಲಸ ಕಾರ್ಯಗಳನ್ನು ಮಾಡಬಾರದು ಎಂಬುದನ್ನು ಅರಿತ ಜೀವನಪೂರ್ತಿ ತಮ್ಮ ಸಮಾಜ ಸೇವೆಗಾಗಿ ಸವಿದವರು ಈ ಹೇರೂರವರಾಗಿದ್ದಾರೆ.

ಒಟ್ಟಾರೆ ಕೋಲಿ–ಕಬ್ಬಲಿಗ ಸಮಾಜದ ಹುಟ್ಟು ಹೋರಾಟಗಾರ, ಸ್ವಾಭಿಮಾನಿ ಹಾಗೇ ಹಿರಿಯ ನಾಯಕರಾದ ಶ್ರೀ ವಿಠ್ಠಲ ಹೇರೂರವರು ಸಮಾಜದ ಅನೇಕ ಯುವಕರಿಗೆ ಮಾರ್ಗದರ್ಶನ ನೀಡಿ ಮಾದರಿ ನಾಯಕರೆನಿಸಿಕೊಂಡರು. ಬುದ್ಧ–ಬಸವ–ಅಂಬೇಡ್ಕರ್‌ರವರ ತತ್ವಗಳಲ್ಲಿ ನಂಬಿಕೆ ಹೊಂದಿದ್ದ ಇವರು ಯುವ ಮಿತ್ರರಿಗೆ ಸಂಘಟನಾ ಮನೋಭಾವ ರಾಜಕೀಯ ಶಿಕ್ಷಣ ವಿಚಾರ ಸಂಕೀರ್ಣಗಳು ಸಮಾಜದ ಚಿಂತನೆಗಳ ಬಗ್ಗೆ ಹೋರಾಟದ ವಿಧಾನಗಳ ಬಗ್ಗೆ ತಿಳಿಸಿಕೊಟ್ಟರು.

**ಪರಾಮರ್ಶನ ಗ್ರಂಥಗಳು**


- ಬಸವರಾಜು. ಎಲ್. (ಸಂ.). (2018). *ಸರ್ವಜ್ಞನ ವಚನಗಳು.* ಬುಕ್ಸ ಇಂಟರ್ ನ್ಯಾಷನಲ್.
- ಗುರುನಾಥ ಬಿ ಹೇರೂರ. *ಸಾಮಾಜಿಕ ನ್ಯಾಯದ ಹರಿಕಾರ ವಿಠ್ಠಲ ಹೇರೂರ ಜೀವನ ಚರಿತ್ರೆ ಭಾಗ–1*